ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016-17 ದಿನಾಂಕ:08-08-2016

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ / ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ಪ್ರಧಾನ ಮಂತ್ರಿ ಸುರಕ್ಷಿತ ಮಾತೃತ್ವ ಅಭಿಯಾನ ಹಾಗೂ ಅಮ್ಮಂದಿರ ಸಂಪೂರ್ಣ ವಾತ್ಸಲ್ಯ MAA ಕಾರ್ಯಕ್ರಮ ಚಾಲನಾ ಸಮಾರಂಭ.<br><br>ಉದ್ಘಾಟನೆ:<br><br>ಕೆ. ಆರ್. ರಮೇಶ್ ಕುಮಾರ್,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.<br><br>ಅಧ್ಯಕ್ಷತೆ:<br><br>ಆರ್. ದಿನೇಶ್‌ಗುಂಡೂರಾವ್,<br>ಶಾಸಕರು | 09-08-2015<br>ಮಂಗಳವಾರ<br>ಬೆಳಿಗ್ಗೆ<br>9-00 ಗಂಟೆಗೆ | ಕೆ.ಸಿ. ಜನರಲ್ ಆಸ್ಪತ್ರೆ,<br>ಮಲ್ಲೇಶ್ವರಂ,<br>ಬೆಂಗಳೂರು |
| 2.. | ಪತ್ರಿಕಾಗೋಷ್ಠಿ:<br><br>ಅಧ್ಯಕ್ಷರು,<br>ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ,<br>ಬೆಂಗಳೂರು<br><br>ಸಂಪರ್ಕ: ದೂರವಾಣಿ<br><br>080-22240445/6 | 09-08-2015<br>ಮಂಗಳವಾರ<br>ಅಪರಾಹ್ನ<br>12-00 ಗಂಟೆಗೆ | ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಕಚೇರಿ, ನಾಲ್ಕನೇ ಮುಖ್ಯ ರಸ್ತೆ, 16 ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು – 560 027 |

| | | | |
|---|---|---|---|
| 3. | <u>ಪತ್ರಿಕಾಗೋಷ್ಠಿ:</u><br><br>ಡಾ. ಕಮಲೇಶ್ ಕುಮಾರ್ ಪಾಂಡೆ,<br>ಮುಖ್ಯ ಆಯುಕ್ತರು,<br>ಅಂಗವಿಕಲ ವ್ಯಕ್ತಿಗಳ ಅಧಿನಿಯಮ,<br>ಭಾರತ ಸರ್ಕಾರ.<br><br>ಸಂಪರ್ಕ:<br><br>ದೂರವಾಣಿ ಸಂಖ್ಯೆ:<br><br>080 – 23462625<br>080– 23462029 | 09–08–2015<br>ಮಂಗಳವಾರ<br>ಮಧ್ಯಾಹ್ನ<br>3–30 ಗಂಟೆಗೆ | ರಾಜ್ಯ ಅಂಗವಿಕಲ ವ್ಯಕ್ತಿಗಳ ಅಧಿನಿಯಮ ಕಚೇರಿ,<br>ನಂ. 55, 2ನೇ ಮಹಡಿ,<br>"ಅಭಯ ಸಂಕೀರ್ಣ",<br>ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಕಟ್ಟಡ,<br>ರಿಸಲ್ದಾರ್ ರಸ್ತೆ,<br>ಶೇಷಾದ್ರಿಪುರಂ,<br>ಬೆಂಗಳೂರು – 560 020. |

ನಿರ್ದೇಶಕರ ಪರವಾಗಿ

## <u>ಪತ್ರಿಕಾ ಪ್ರಕಟಣೆ</u>

# <u>ಮರ ತೆರವುಗೊಳಿಸಲು ಸಲಹೆ ನೀಡಿ</u>

ಬೆಂಗಳೂರು, ಆಗಸ್ಟ್ 8 (ಕರ್ನಾಟಕ ವಾರ್ತೆ)

ಮೈಸೂರು ತಾಲ್ಲೂಕು ಕ್ಯಾತಮಾರನಹಳ್ಳಿ ಸ.ನಂ. 196 ರಲ್ಲಿನ 15 ಎಕರೆ ಜಮೀನಿನಲ್ಲಿ ಜಿಲ್ಲಾ ಮಟ್ಟದ ಕಚೇರಿಗಳ ಸಂಕೀರ್ಣ ಕಟ್ಟಡ ನಿರ್ಮಾಣ ಹಾಗೂ ಗನ್ ಹೌಸ್ ರಸ್ತೆಯಿಂದ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 212 ನಂಜನಗೂಡು ರಸ್ತೆ ಜಂಕ್ಷನ್‌ವರೆಗೆ ನಾಲ್ಕು ಪಥದ ರಸ್ತೆ ನಿರ್ಮಾಣ ಕಾಮಗಾರಿ ಮಾಡುವ ಸಲುವಾಗಿ ಮರ ತೆರವುಗೊಳಿಸಲು ಸಾರ್ವಜನಿಕರ ಅಭಿಪ್ರಾಯ ಹಾಗೂ ಸಲಹೆ–ಸೂಚನೆಗಳನ್ನು ಪಡೆಯುವ ಉದ್ದೇಶದಿಂದ ಆಗಸ್ಟ್ 12 ರಂದು ಬೆಳಿಗ್ಗೆ 11–00 ಗಂಟೆಗೆ ಮೈಸೂರು ಜರ್ಮನ್ ಪ್ರೆಸ್ ಹತ್ತಿರ ಸಭೆ ಕರೆಯಲಾಗಿದೆ.

ಬಾಬು:ಜಿಪಿಆರ್.

# <u>ದಿವಂಗತ ನಿಜಲಿಂಗಪ್ಪ ಅವರ</u>
# <u>ಆಡಳಿತ ಅವಧಿ ಅಭಿವೃದ್ಧಿಯ ಪರ್ವವಾಗಿತ್ತು</u>

ಬೆಂಗಳೂರು, ಆಗಸ್ಟ್ 8 (ಕರ್ನಾಟಕ ವಾರ್ತೆ)

ಮಾಜಿ ಮುಖ್ಯಮಂತ್ರಿ ದಿವಂಗತ ನಿಜಲಿಂಗಪ್ಪ ಅವರ 16ನೇ ಪುಣ್ಯತಿಥಿ ಅಂಗವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಧಾನಸೌಧದ ಪಶ್ಚಿಮ ದಿಕ್ಕಿನಲ್ಲಿರುವ ಅವರ ಪ್ರತಿಮೆಯ ಮುಂಭಾಗ ಇರಿಸಲಾಗಿದ್ದ ಅವರ ಭಾವಚಿತ್ರಕ್ಕೆ ನಮನ ಸಲ್ಲಿಸುವ ಮೂಲಕ ಗೌರವ ಸಮರ್ಪಿಸಿದರು.

ದಿವಂಗತ ನಿಜಲಿಂಗಪ್ಪ ಅವರ ಪ್ರತಿಮೆಗೆ ಮಾಲರ್ಪಣೆ ಮಾಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಅವರು ರಾಜ್ಯದ ಅಭಿವೃದ್ಧಿಯ ಹರಿಕಾರರಾಗಿದ್ದ ನಿಜಲಿಂಗಪ್ಪ ಅವರ ಆಡಳಿತದಲ್ಲಿ ರಾಜ್ಯದಲ್ಲಿ ಅಭಿವೃದ್ಧಿಯ ಪರ್ವವೇ ಆರಂಭವಾಯಿತು ಎಂದರು.

ದಿವಂಗತ ಮಾಜಿ ಮುಖ್ಯಮಂತ್ರಿ ನಿಜಲಿಂಗಪ್ಪ ಅವರು ತಮ್ಮ ಆಡಳಿತದ ಅವಧಿಯಲ್ಲಿ ನೀರಾವರಿ ಯೋಜನೆಗಳೂ ಹಾಗೂ ವಿದ್ಯುತ್ ಉತ್ಪಾದನೆ ಕಡೆ ಹೆಚ್ಚು ಒತ್ತು ನೀಡಿದ್ದರು. ರಾಜ್ಯದಲ್ಲಿ ಮೂರು ಬಾರಿ ಮುಖ್ಯಮಂತ್ರಿ ಆಗಿದ್ದ ನಿಜಲಿಂಗಪ್ಪ ಅವರು ಕರ್ನಾಟಕದ ಏಕೀಕರಣಕ್ಕಾಗಿ ಹೋರಾಡಿದವರು. ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಮರಿಸಿದರು.

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಸಮಾಜ ಕಲ್ಯಾಣ ಸಚಿವ ಹೆಚ್. ಆಂಜನಯ್ಯ, ಮಾಜಿ ಕೇಂದ್ರ ಸಚಿವ ಹಾಗೂ ಮಾಜಿ ವಿಧಾನ ಪರಿಷತ್ ಸದಸ್ಯ ಎಂ.ವಿ. ರಾಜಶೇಖರನ್ ಹಾಗೂ ಸರ್ಕಾರದ ಹಿರಿಯ ಅಧಿಕಾರಿಗಳು ಪಾಲ್ಗೊಂಡಿದ್ದರು.

ಬಾಬು:ಕೆಪಿಪಿ:ಜಿಪಿಆರ್.

## ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ಇನ್ನು ಮರೀಚಿಕೆಯಲ್ಲ

ಬೆಂಗಳೂರು ಆಗಸ್ಟ್ 8 (ಕರ್ನಾಟಕ ವಾರ್ತೆ)

ಕೇಂದ್ರ ಸರ್ಕಾರ 2004ನೇ ಇಸವಿಯಲ್ಲಿ ಕನ್ನಡಕ್ಕೆ ನೀಡಿದ್ದ ಶಾಸ್ತ್ರೀಯ ಸ್ಥಾನಮಾನವನ್ನು ಪ್ರಶ್ನಿಸಿ ಚೆನ್ನೈನ ವಕೀಲರಾದ ಗಾಂಧಿ ಎಂಬುವವರು ಮದ್ರಾಸ್ ಉಚ್ಛನ್ಯಾಯಾಲಯದಲ್ಲಿ 2008ರಲ್ಲಿ ಹೂಡಿದ್ದ ದಾವೆಗಳು ವಜಾಗೊಳ್ಳುವ ಮೂಲಕ ಕನ್ನಡ ಭಾಷೆಗೆ ಸಿಕ್ಕ ಅತ್ಯುನ್ನತ ಗೌರವಕ್ಕೆ ಕಾನೂನು ಅಂಕಿತವೂ ಸಿಕ್ಕಿದಂತಾಗಿದೆ.

2008ರಲ್ಲಿ ಗಾಂಧಿ ಎನ್ನುವವರು ಮದ್ರಾಸ್ ಉಚ್ಛನ್ಯಾಯಾಲಯದಲ್ಲಿ ಎರಡು ರಿಟ್ ಅರ್ಜಿಗಳನ್ನು ದಾಖಲಿಸಿ ಕರ್ನಾಟಕ ರಾಜ್ಯ ಸರ್ಕಾರದ ಮುಖ್ಯಕಾರ್ಯದರ್ಶಿಗಳನ್ನು ಆರನೇ ಪ್ರತಿವಾದಿಯನ್ನಾಗಿ ಮಾಡಿದ್ದರು. ಈ ಕುರಿತಂತೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಸ್ವಯಂ ಪ್ರೇರಿತವಾಗಿ ಮದ್ರಾಸಿನ ಉಚ್ಛನ್ಯಾಯಾಲಯಕ್ಕೆ ಪ್ರತಿ ಪ್ರಮಾಣ ಪತ್ರಗಳನ್ನು ಸಲ್ಲಿಸಿ ಚೆನ್ನೈ ಹಿರಿಯ ವಕೀಲರಾದ ಕಾರ್ತಿಕೇಯನ್ ಮೂಲಕ ಸಮರ್ಥ ವಾದವನ್ನು ಮಂಡಿಸಿತ್ತು. ತದನಂತರ ಕರ್ನಾಟಕ ಸರ್ಕಾರವು ತನ್ನನ್ನು ಸಹ ಕಕ್ಷಿದಾರರನ್ನಾಗಿ ಮಾಡಿಕೊಂಡು ಹಿರಿಯ ಸರ್ಕಾರಿ ವಕೀಲರಾದ ಶ್ರೀಮತಿ ಸುಶೀಲ ರವರ ಸಮರ್ಥ ವಾದದ ಮೂಲಕ ಪ್ರಾಧಿಕಾರದ ಕಾನೂನು ಹೋರಾಟಕ್ಕೆ ತನ್ನ ಬೆಂಬಲವನ್ನು ವಿಸ್ತರಿಸಿತ್ತು.

ಎಂಟು ವರ್ಷಗಳ ಈ ಹೋರಾಟಕ್ಕೆ ಕಡೆಗೂ ಅಂತಿಮ ಜಯ ದೊರಕಿದ್ದು, ಇನ್ನು ಮುಂದೆ ಕನ್ನಡದ ಹಿರಿಮೆಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟಕ್ಕೆ ತೆಗೆದುಕೊಂಡು ಹೋಗುವ ಎಲ್ಲಾ ಸಾಧ್ಯತೆಗಳು ನಿಚ್ಚಳವಾಗಿವೆ.

ಪ್ರಸ್ತುತ ಮೈಸೂರಿನಲ್ಲಿ ಹಂಗಾಮಿ ವ್ಯವಸ್ಥೆಯಾಗಿ ಕಾರ್ಯ ನಿರ್ವಹಿಸುತ್ತಿರುವ ಶಾಸ್ತ್ರೀಯ ಕನ್ನಡ ಅತ್ಯುನ್ನತ ಕೇಂದ್ರವನ್ನು ಬೆಂಗಳೂರಿನಲ್ಲಿ ತೆರೆಯಲು ಎಲ್ಲಾ ಪೂರ್ವಭಾವಿ ವ್ಯವಸ್ಥೆಗಳನ್ನು ಕರ್ನಾಟಕ ಸರ್ಕಾರ ಮಾಡಿಕೊಂಡಿದ್ದು, ವ್ಯವಸ್ಥಿತ ಪ್ರಕ್ರಿಯೆಗೆ ಇಷ್ಟರಲ್ಲಿಯೇ ಚಾಲನೆ ಸಿಗಲಿದೆ.

ಈ ಕಾನೂನು ಹೋರಾಟವನ್ನು ಗೆಲ್ಲಲು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಸಚಿವರಾದ ಶ್ರೀಮತಿ ಉಮಾಶ್ರೀರವರನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ ಡಾ. ಎಲ್. ಹನುಮಂತಯ್ಯ ಅಭಿನಂದಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಕನ್ನಡ ಭಾಷೆಯ ಹಿರಿಮೆಯನ್ನು ಜಗತ್ತಿಗೆ ಹರಡುವ ಎಲ್ಲಾ ಕಾರ್ಯಕ್ರಮಗಳನ್ನು ಅತ್ಯಂತ ತುರ್ತಾಗಿ ನಿರ್ವಹಿಸಬೇಕೆಂದು ಅವರು ಸರ್ಕಾರವನ್ನು ಆಗ್ರಹಿಸಿದ್ದಾರೆ.
ಬಾಬು/ಕೆಎಂ